**OS: 24/2020**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 17.07.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ನಂಃ 3 ರಿಂದ 8 ರವರ ಪರ ವಕೀಲರಿಂದ</u>**

ನನ್ನ ಜೊತೆ ಒಡಹುಟ್ಟಿದವರು 9 ಜನ ಇರುತ್ತಾರೆ. ಅವರುಗಳೆಂದರೆ ಮಲ್ಲಮ್ಮ, ಚೌಡಪ್ಪ, ನಿಂಗಪ್ಪ, ಬಸವರಾಜಪ್ಪ, ನಾನು, ಶಿವಣ್ಣ, ಲೋಕೇಶಪ್ಪ, ಉಮೇಶಪ್ಪ, ಚನ್ನಪ್ಪ ಎಂದು ಇರುತ್ತಾರೆ. ಚೌಡಪ್ಪನವರು ಮೃತಪಟ್ಟಿರುತ್ತಾರೆ. ಅವರ ಹೆಂಡತಿ ಮತ್ತು 5 ಜನ ಮಕ್ಕಳು ಇದ್ದಾರೆ. ಅವರಿಗೆ 18 ವರ್ಷ ತುಂಬಿದೆ ಎಂದರೆ ಸರಿ. ಅವರುನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಕಳೆದ 5-6 ವರ್ಷಗಳಿಂದ ನಾವು ಬೇರೆ-ಬೇರೆ ಆಗಿ ವಾಸವಾಗಿದ್ದೇವೆ, ಆದರೆ ಆಸ್ತಿಗಳನ್ನು ಹಂಚಿಕೊಂಡಿರುವುದಿಲ್ಲ. ನನಗೆ 4 ಎಕರೆ ಜಮೀನು ಬಂದಿದೆ, ಪ್ರತಿವಾದಿಗಳಿಗೆ ತಲಾ 15-20 ಎಕರೆ ಜಮೀನು ಬಂದಿದೆ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಈ ರೀತಿಯಾಗಿ ಆಸ್ತಿಯನ್ನು ನಾವು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ. ನನ್ನ ತಂದೆಯ ಹೆಸರಿನಲ್ಲಿ ಯಾವ-ಯಾವ ಆಸ್ತಿಗಳು ಇದ್ದವು, ಅವುಗಳ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಯಾವ-ಯಾವ ಆಸ್ತಿಯಲ್ಲಿ ಎಷ್ಟು ಭಾಗ ಬರಬೇಕೆಂದು ನನಗೆ ಗೊತ್ತಿಲ್ಲ. ನನ್ನ ಸಹೋದರರ ಹೆಸರಿನಲ್ಲಿರುವ ಆಸ್ತಿಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಹೇಳಲು ನನಗೆ ಗೊತ್ತಾಗುವುದಿಲ್ಲ.

(ಪ್ರತಿವಾದಿ ನಂಃ 1 ಮತ್ತು 2 ಪರ ವಕೀಲರು ಗೈರು ಹಾಜರಿರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಪ್ರತಿವಾದಿ ನಂಃ 3 ರಿಂದ 8 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**